# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.592-2014** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಸಣ್ಣಪ್ಪ<br>ವಳಗೆರೆ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 18-11-2022. |

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಎನ್.ಎನ್ ವಕೀಲರಿಂದಃ**

7. ದಿ.17-04-1982 ರಲ್ಲಿ ಪ್ರತಿವಾದಿಯವರು ದಾವಾ ಷೆಡ್ಯೂಲ್ ಸ್ವತ್ತನ್ನು ವೀರಭದ್ರಪ್ಪನವರಿಗೆ ಕ್ರಯಕ್ಕೆ ನೀಡಿದ ಸಂದರ್ಭದಲ್ಲಿ ದಾವಾ ಷೆಡ್ಯೂಲ್ ಸ್ವತ್ತು ಸರ್ವೆ ನಂಬರ್ ಸ್ವತ್ತಾಗಿತ್ತು. ಆದರೆ ಸದರಿ ಸ್ವತ್ತಿನ ಸರ್ವೆ ನಂಬರ್ ಅನ್ನು ಹೇಳಲಾಗುವುದಿಲ್ಲ. ವೀರಭದ್ರಪ್ಪನವರು ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ ಅದನ್ನು ಆರ್.ಟಿ.ಸಿ ಜಮೀನಾಗಿಯೇ ಅನುಭವಿಸಿಕೊಂಡು ಬಂದಿದ್ದರು. ನನ್ನ ತಂದೆಯವರು ದಿ.06-11-1989 ರಂದು ದಾವಾ ಷೆಡ್ಯೂಲ್ ಸ್ವತ್ತನ್ನು ವೀರಭದ್ರಪ್ಪನವರಿಂದ ನೋಂದಣಿ ಅಲ್ಲದ ಕ್ರಯ ಪತ್ರದ ಮುಖೇನ ಕ್ರಯಕ್ಕೆ ಪಡೆದಾಗ ಸದರಿ ಸ್ವತ್ತು ಗ್ರಾಮ ಪಂಚಾಯ್ತಿಗೆ ಸೇರಿದ ಸ್ವತ್ತಾಗಿತ್ತು. ನನ್ನ ತಂದೆಯವರು ದಾವಾ ಷೆಡ್ಯೂಲ್ ಸ್ವತ್ತಿನ ದಾಖಲೆಗಳನ್ನು ನೋಡಿಯೇ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ

8.ನಿಪಿ-1 ರಲ್ಲಿ ಖಾಲಿ ನಿವೇಶನ ಎಂದು ನಮೂದು ಆಗಿದ್ದು ಆದರೆ ನಿಪಿ-1 ರಲ್ಲಿ ಸರ್ವೇ ನಂಬರ್ ನಮೂದು ಆಗಿರುವುದಿಲ್ಲ ಅದನ್ನು ನೀವು ಓದಿ ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಸಲ್ಲಿಸುವ ವೇಳೆಯಲ್ಲಿ ನಿಪಿ-5 ರ ಕ್ರಯ ಪತ್ರವನ್ನು ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. ನಿಪಿ-5 ರಲ್ಲಿ ದಾವಾ ಷೆಡ್ಯೂಲ್ ಸ್ವತ್ತು ಸರ್ವೆ ನಂಬರ್ ಸ್ವತ್ತೋ ಅಥವಾ ಗ್ರಾಮ ಠಾಣಾ ಸ್ವತ್ತೋ ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ ಖಾತೆ ಬದಲಾವಣೆ ಮಾಡಿಕೊಡುವಂತೆ ಗ್ರಾಮ ಪಂಚಾಯ್ತಿಗೆ 1998-99 ಸಾಲಿಗಿಂತ ಮೊದಲು ಅರ್ಜಿ ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನನ್ನ ತಂದೆಯವರಿಗೆ ನನ್ನನ್ನು 2 ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರು ಮಕ್ಕಳು ಇರುವುದಿಲ್ಲ.

9. ಸರ್ವೇ ನಂಬರ್ 1/1 ಎ ರ ವಿಸ್ತೀರ್ಣ ಖರಾಬು 02 ಗುಂಟೆ ಸೇರಿ ಒಟ್ಟು 2 ಎಕರೆ 8 ಗುಂಟೆ ಸ್ವತ್ತು ಇದ್ದು, ಸದರಿ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕಾಗಲಿ ಸ್ವಾಧೀನವಾಗಲಿ ಇರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕಾಗಲಿ, ಅಧಿಕಾರವಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತನ್ನು ಖಾತೆ ಮಾಡಿಸಿಕೊಳ್ಳುವ ಸಮಯದಲ್ಲಿ ಪಂಚಾಯ್ತಿಗೆ ನೀಡಿದ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೇ ನಂಬರ್ 1/1 ಎ ಸ್ವತ್ತು ಪ್ರತಿವಾದಿಗಳಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತು ಬಸಪ್ಪ, ಸಂಗಪ್ಪ, ನಾಗಪ್ಪ, ಚಿಕ್ಕಸುಬ್ಬಪ್ಪ ಮುಂತಾದವರಗೆ ಸೇರಿದ ಸ್ವತ್ತಾಗಿರುತ್ತದೆ. ಬಸಪ್ಪನವರೇ ಈ ಕೇಸಿನ ಪ್ರತಿವಾದಿ ಎಂದರೆ ಸರಿ. ನಾನು ಹೇಳುವಂತೆ ದಾವಾ ಷೆಡ್ಯೂಲ್ ಸ್ವತ್ತು ನನ್ನ ತಂದೆಯವರಿಗೆ ಸೇರಿದ ಸ್ವತ್ತಾಗಿರುವುದಿಲ್ಲ, ಸದರಿ ಸ್ವತ್ತನ್ನು ನನ್ನ ತಂದೆ ಕ್ರಯಕ್ಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನಾಗಲಿ ನನ್ನ ಸಹೋದರನಾಗಲಿ ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತೇ ದಿ.17-04-1982 ರ ಕ್ರಯ ಪತ್ರದಲ್ಲಿ ನಮೂದು ಆದ ಸ್ವತ್ತು ಎಂದು ತೋರಿಸಲು ಯಾವಾ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಕ್ರಯ ಪತ್ರವನ್ನೇ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಬಸಪ್ಪ, ಸಂಗಪ್ಪ, ನಾಗಪ್ಪ, ಚಿಕ್ಕಸುಬ್ಬಪ್ಪ ರವರಿಗೆ ಸೇರಿದ ಸರ್ವೆ ನಂ.1/1 ಎ ರ ಜಮೀನನ್ನು ನಾನು ನೋಡಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತು 1/1 ಎ ರಲ್ಲಿ ಇದ್ದು, ಸದರಿ ಸ್ವತ್ತು ಪ್ರತಿವಾದಿಗೆ ಸೇರಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು, ಅಧಿಕಾರ ಹಾಗೂ ಸ್ವಾಧೀನವಾಗಲಿ ಇರುವುದಿಲ್ಲ, ಇಂದಿಗೂ ಸಹ ಪ್ರತಿವಾದಿಯೇ ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಈ ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ಪ್ರತಿವಾದಿಗೆ ಸುಮಾರು 80 ವರ್ಷ ವಯಸ್ಸಾಗಿದ್ದು, ಆರೋಗ್ಯವಾಗಿರುತ್ತಾರೆ. ಪ್ರತಿವಾದಿಗೆ ಆರೋಗ್ಯ ಸರಿ ಇಲ್ಲದೇ ಇದ್ದರೂ ಆರೋಗ್ಯವಾಗಿದ್ದಾರೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**